ವಿಜಯವಾಣಿ

ಕನ್ನಡಿಗರ ಧ್ವನಿ

Wednesday 17th April 2024

Mr. Tejas RVCE Student cleared UPSC Exam with 243 Rank

ಪಿಯುಸಿ ಫೇಲಾದವನ ಯಶೋಗಾಥೆ

ಬಳ್ಳಾರಿ ಜಿಲ್ಲೆಯ ಶಾಂತಪ್ಪ ಕುರಬರಗೆ 644ನೇ ರ‍್ಯಾಂಕ್ | ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ

■ ವಿಜಯವಾಣಿ ಸುದ್ದಿಜಾಲ ಬಳ್ಳಾರಿ

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುವವರು ಮತ್ತು ದ್ವಿತೀಯ ಪಿಯು ಅನುತ್ತೀರ್ಣರಾದವರು ಜೀವನವೇ ಮುಗಿದುಹೋಯಿತು. ನಾವು ಇನ್ನೇನು ಪ್ರಯೋಜನವಿಲ್ಲವೆನ್ನುವವರಿಗೆ ಯುಪಿಎಸ್ಸಿಯಲ್ಲಿ 644ನೇ ರ‍್ಯಾಂಕ್ ಪಡೆದಿರುವ ಶಾಂತಪ್ಪ ಕುರುಬಾರ ಮಾದರಿಯಾಗಿದ್ದಾರೆ.

ಜಿಲ್ಲೆಯ ಕುರುಗೋಡು ತಾಲೂಕಿನ ಹೊಸ ಗೆಣಿಕೆಹಾಳ್ ಗ್ರಾಮದ ಶಾಂತಪ್ಪ ಕುರಬರ ಪಿಯುಸಿಯಲ್ಲಿ ಅನುತ್ತೀರ್ಣ, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಏಳು ಬಾರಿ ವಿಫಲಗೊಂಡರೂ ಛಲ ಬಿಡದೆ ಸಾಧನೆಯ ಮೆಟ್ಟಿಲು ಏರಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆದಿರುವ ಶಾಂತಪ್ಪ ಎಂಟನೇ ಪ್ರಯತ್ನದಲ್ಲಿ 644 ರ‍್ಯಾಂಕ್ ಪಡೆದಿದ್ದಾರೆ.

> **ಯಾವುದೇ ಉನ್ನತ ಸ್ಥಾನ ದೊರೆಯಬೇಕಾದರೆ ಆತ್ಮವಿಶ್ವಾಸ, ಛಲ ಹಾಗೂ ಕಠಿಣ ಪರಿಶ್ರಮ ಇರಬೇಕು. ನನ್ನ ಈ ಸಾಧನೆಗೆ ಗುರು ಗಾದಿಲಿಂಗಪ್ಪ, ಕುಟುಂಬದ ಸಹಕಾರ ಹಾಗೂ ಗೆಳೆಯರ ಬೆಂಬಲ ಕಾರಣ.**
> | ಶಾಂತಪ್ಪ ಕುರುಬರ ಯುಪಿಎಸ್‌ಸಿ ಸಾಧಕ

ಮೂಲತಃ ಕೃಷಿ ಕುಟುಂಬದ ಶಾಂತಪ್ಪ ಕುರುಬರ ಪ್ರಸ್ತುತ ಪಿಎಸ್‌ಐ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬಳ್ಳಾರಿಯ ಮುನ್ಸಿಪಲ್ ಕಾಲೇಜಿನಲ್ಲಿ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಓದಿದ್ದು, ದ್ವಿತೀಯ ವರ್ಷದಲ್ಲಿ ಅನುತ್ತೀರ್ಣಗೊಂಡಿದ್ದರು. ಆಗ ಕೂಲಿ ಕೆಲಸ ಮಾಡಿದ್ದು, ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

2017ನೇ ಬ್ಯಾಚ್‌ನ ಪಿಎಸ್‌ಐ ಆಗಿರುವ ಶಾಂತಪ್ಪ ಬೆಂಗಳೂರಿನ ಪೊಲೀಸ್ ಮಹಾನಿರ್ದೇಶಕ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಗತಿ ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ಸೇರಿ ಐದಾರು ಹುದ್ದೆಗಳಿಗೆ ಆಯ್ಕೆಯಾಗಿದ್ದರು. ಯುಪಿಎಸ್‌ಸಿಯಲ್ಲಿ ಎರಡು ಬಾರಿ ಸಂದರ್ಶನದಲ್ಲಿ ವೈಫಲ್ಯ ಕಂಡಿದ್ದರು. 2012ರಲ್ಲಿ ದೆಹಲಿಯ ವಾಜಿರಾಂ ಹಾಗೂ ರವಿ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆದಿದ್ದಾರೆ. ಪೊಲೀಸ್ ಕೆಲಸದ ಒತ್ತಡದ ನಡುವೆಯು ಯುಪಿಎಸ್‌ಸಿ ಪರೀಕ್ಷೆ ಉತ್ತೀರ್ಣರಾಗಿದ್ದಾರೆ. ಕರೊನಾ ಸಮಯದಲ್ಲಿ ಬೆಂಗಳೂರಿನ ಕೊಳಗೇರಿ ಪ್ರದೇಶದಲ್ಲಿನ ಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸ ನೀಡುವ ಮೂಲಕ ಸಾಮಾಜಿಕ ಕಾರ್ಯವನ್ನೂ ಮಾಡಿದ್ದಾರೆ.

ಪಬ್ಲಿಕ್ ಟಾಯ್ಲೆಟ್‌ಗಾಗಿ ಅಭಿಯಾನ ಮಾಡಿದ್ದ ಶಾಂತಪ್ಪ

ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಪಬ್ಲಿಕ್ ಟಾಯ್ಲಟ್‌ಗಾಗಿ ಸಬ್ ಇನ್‌ಸ್ಪೆಕ್ಟರ್ ಶಾಂತಪ್ಪ ಅವರು ಟ್ವಿಟರ್ ಅಭಿಯಾನ ಮಾಡಿದ್ದರು. ಈ ಬಗ್ಗೆ 2022 ಏ.19 ರಂದು ವಿಜಯವಾಣಿಯಲ್ಲಿ ''ಪಬ್ಲಿಕ್ ಟಾಯ್ಲೆಟ್‌ಗಾಗಿ ಎಸ್‌ಐ ಹೋರಾಟ' ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಇದು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿ ಶಾಂತಪ್ಪ ಅವರ ಹೋರಾಟಕ್ಕೆ ಸಾರ್ವಜನಿಕರು ಕೂಡ ಕೈ ಜೋಡಿಸಿದರು. ನಂತರ ಸ್ವಂತ ಖರ್ಚಿನಲ್ಲಿ ಸಂಚಾರಿ ಶೌಚಗೃಹವನ್ನು ನಿರ್ಮಿಸಿ ಸಾರ್ವಜನಿಕರ ಉಪಯೋಗಕ್ಕೆ ನೀಡಿದ್ದರು.

ಎರಡನೇ ಬಾರಿಯೂ ಗೆಲುವು

ಮೈಸೂರು: ಕೆ.ಆರ್. ನಗರದ ಕೆಸ್ತೂರುಕೊಪ್ಪಲು ನಿವಾಸಿಯಾದ ಕೃಷಿಕ ಜಯರಾಮೇಗೌಡ ಹಾಗೂ ಅಂಗನವಾಡಿ ಶಿಕ್ಷಕಿ ಗಿರಿಜಮ್ಮ ದಂಪತಿ ಪುತ್ರ ಜಿ. ಭಾನುಪ್ರಕಾಶ್ ಎರಡನೇ ಬಾರಿಗೆ ಯಶಸ್ಸು ಪಡೆದಿದ್ದಾರೆ. ಕಳೆದ ಬಾರಿ ಇವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 448ನೇ ರ‍್ಯಾಂಕ್ ಪಡೆದು ಐಪಿಎಸ್ ಅಧಿಕಾರಿಯಾಗಿ ಪ್ರಸ್ತುತ ತರಬೇತಿಯಲ್ಲಿದ್ದಾರೆ. ಮತ್ತಷ್ಟು ಉತ್ತಮ ರ‍್ಯಾಂಕ್ ಪಡೆಯುವ ಸಲುವಾಗಿ ಭಾನುಪ್ರಕಾಶ್ 4ನೇ ಬಾರಿ ಯುಪಿಎಸ್‌ಸಿ ಪರೀಕ್ಷೆಯನ್ನು ಎದುರಿಸಿದ್ದರು. ಆದರೆ, ಈ ಬಾರಿ ಅವರಿಗೆ 600ನೇ ರ‍್ಯಾಂಕ್ ದೊರೆತಿದೆ.

ಮತ್ತೆ ದೃಷ್ಟಿವಿಶೇಷಚೇತನ ಸಾಧನೆ

ಮೈಸೂರು: ದೃಷ್ಟಿದೋಷವುಳ್ಳ ಯುವತಿಯೊಬ್ಬರು ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಮೂರನೇ ಪ್ರಯತ್ನದಲ್ಲಿ 721ನೇ ರ‍್ಯಾಂಕ್ ಪಡೆದಿದ್ದಾರೆ. ಪಿರಿಯಾಪಟ್ಟಣ ತಾಲೂಕಿನ ಕುಡಕೂರು ಗ್ರಾಮದ ತಾಂಡವಮೂರ್ತಿ-ನವನೀತಾ ದಂಪತಿ ಪುತ್ರಿಯಾದ ಕೆ.ಟಿ. ಮೇಘನಾ ಪ್ರಸ್ತುತ ಬೆಂಗಳೂರಿನ ಕೆಂಗೇರಿಯಲ್ಲಿ ನೆಲೆಸಿದ್ದಾರೆ. 2021ನೇ ಸಾಲಿನಲ್ಲಿ 425ನೇ ರ‍್ಯಾಂಕ್ ಪಡೆದುಕೊಂಡಿದ್ದರು. ಪ್ರಸ್ತುತ ಇವರು ಭಾರತೀಯ ಮಾಹಿತಿ ಸೇವೆಯಲ್ಲಿ ಅಧಿಕಾರಿಯಾಗಿ ನವದೆಹಲಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಗೃಹಿಣಿಗೆ 787ನೇ ರ‍್ಯಾಂಕ್

ಮೈಸೂರು: ಎಚ್.ಡಿ. ಕೋಟೆ ತಾಲೂಕಿನ ಆಲನಹಳ್ಳಿಯ ಯೋಗೇಶ್ ಪತ್ನಿ, ಹುಣಸೂರು ತಾಲೂಕಿನ ಗೆಜ್ಜಯ್ಯನ ವಡ್ಡರಗುಡಿಯ ಕೃಷಿಕ ನಂಜಪ್ಪ ಹಾಗೂ ಸುಂದರಮ್ಮ ದಂಪತಿ ಪುತ್ರಿ ತೇಜಸ್ವಿನಿ ಮೂರನೇ ಪ್ರಯತ್ನದಲ್ಲಿ 787ನೇ ರ‍್ಯಾಂಕ್ ಪಡೆದಿದ್ದಾರೆ. ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್ (ಎಂಸಿಎ) ಪದವೀಧರರಾದ ತೇಜಸ್ವಿನಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಐಎಎಸ್ ಅಧಿಕಾರಿಯಾಗಬೇಕು ಎಂಬ ಕನಸಿನಿಂದ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ತೊರೆದು ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ಪ್ರಾರಂಭಿಸಿ ಯಶಸ್ಸು ಕಂಡಿದ್ದಾರೆ.

ಭರತ್ ಸಿ ಯಾರಮ್ 667 ನೇ ರ‍್ಯಾಂಕ್

ಯುಪಿಎಸ್ಸಿ ಪರೀಕ್ಷೆಯನ್ನು 5ನೇ ಪ್ರಯತ್ನದಲ್ಲಿ ಉತ್ತೀರ್ಣನಾಗಿದ್ದೇನೆ. 2018ರಲ್ಲಿ ಪದವಿ ವ್ಯಾಸಂಗ ಮುಗಿಸಿ ಪರೀಕ್ಷೆ ಬರೆಯಬೇಕೆಂದು ನಿರ್ಧರಿಸಿದೆ. ಇದು ನನ್ನ 5ನೇ ಪ್ರಯತ್ನವಾಗಿದೆ. ಮೊದಲ 3 ಪ್ರಯತ್ನದಲ್ಲಿ ಲಿಖಿತ ಪರೀಕ್ಷೆ ಪೂರ್ಣಗೊಳಿಸಿದ್ದೆ. ಸಂದರ್ಶನದಲ್ಲಿ 2ನೇ ಪ್ರಯತ್ನವಾಗಿದೆ. ಅಂತಿಮವಾಗಿ ಅಹತೆ ಪಡೆದಿರುವುದು ಖುಷಿಯಾಗುತ್ತಿದೆ. ತಂದೆ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ. ಮೊದಲ 2 ಪ್ರಯತ್ನಗಳು ಶಿವಮೊಗ್ಗದಲ್ಲಿಯೇ ಓದಿಕೊಂಡು ಪ್ರಯತ್ನಿಸಿದೆ. ಕೊನೆಯ 3 ಪ್ರಯತ್ನಗಳು ಬೆಂಗಳೂರಿಗೆ ಬಂದಿದ್ದೆ. ಪ್ರಸ್ತುತ ಡಿಜಿಟಲ್ ಯುಗದಲ್ಲಿ ಆಡಳಿತದಲ್ಲಿ ಪಾರದರ್ಶಕತೆ ತರಲು ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪೊಲೀಸ್ ಇಲಾಖೆಯಲ್ಲಿ ಸೈಬರ್ ಕ್ರೈಂ ಸೇರಿ ಹಲವು ವಿಷಯಗಳಲ್ಲಿ ಬದಲಾವಣೆ ತರುವ ಆಲೋಚನೆಗಳಿವೆ ಎನ್ನುತ್ತಾರೆ ಭರತ್.

ಉತ್ತರ ಕರ್ನಾಟಕದ ಪ್ರತಿಭೆ

ಹುಬ್ಬಳ್ಳಿಯ ವಿಜೇತಾ ಹೊಸಮನಿ 100ನೇ ರ‍್ಯಾಂಕ್ ಗಳಿಸಿದ್ದಾರೆ. ಮೂಲತಃ ವಿಜಯಪುರದ ವಿಜೇತಾ, ರಾಷ್ಟ್ರಮಟ್ಟದಲ್ಲಿ ನಡೆಸಲಾಗುವ ಕಾನೂನು ಪ್ರವೇಶ ಪರೀಕ್ಷೆಯಲ್ಲಿ ಉತ್ತಮ ರ‍್ಯಾಂಕ್ ಗಿಟ್ಟಿಸಿ ಗುಜರಾತ್‌ನ ಗಾಂಧಿನಗರದಲ್ಲಿರುವ ರಾಷ್ಟ್ರೀಯ ಕಾನೂನು ವಿವಿಯಲ್ಲಿ ಪದವಿ ಪೂರ್ಣಗೊಳಿಸಿದರು. ಬಳಿಕ ಯುಪಿಎಸ್‌ಸಿ ಪರೀಕ್ಷೆ ಎದುರಿಸಲು ಸಿದ್ಧತೆಯಲ್ಲಿ ತೊಡಗಿದರು. ಮೊದಲ ಮೂರು ಪ್ರಯತ್ನಗಳು ಕೈಗೂಡಲೇ ಇಲ್ಲ. ನಾಲ್ಕನೇ ಪ್ರಯತ್ನದಲ್ಲಿ ಪೂರ್ವಭಾವಿ ಪರೀಕ್ಷೆ ಪಾಸಾದರು. ಬಳಿಕ ಮುಖ್ಯ ಪರೀಕ್ಷೆಯನ್ನು ಧೈರ್ಯವಾಗಿ ಎದುರಿಸಿದರು. ನಂತರ ಸಂದರ್ಶನದಲ್ಲೂ ಸೈ ಎನಿಸಿಕೊಂಡು ಐಎಎಸ್ ಹುದ್ದೆಯನ್ನೇ ತೆಕ್ಕೆಗೆ ಪಡೆಯುವ ವಿಶ್ವಾಸದಲ್ಲಿದ್ದಾರೆ. ಸ್ವಂತವಾಗಿಯೇ ತಯಾರಿ ನಡೆಸಿದ್ದ ವಿಜೇತಾ, ಆನ್‌ಲೈನ್ ಮೂಲಕವೂ ಮಾರ್ಗದರ್ಶನ ಪಡೆದಿದ್ದರು. ಐಎಎಸ್ ಗುರಿಯನ್ನು ನನಸಾಗಿಸಿಕೊಂಡ ಸಂಭ್ರಮದಲ್ಲಿದ್ದಾರೆ.

ಹೆತ್ತವರಿಗೆ ಅಚ್ಚರಿ ತಂದ ಕೇರಳ ಯುವಕ!

ಕೊಚ್ಚಿ: ಮಂಗಳವಾರ ಪ್ರಕಟವಾದ ಯುಪಿಎಸ್‌ಸಿ ಫಲಿತಾಂಶ ಕೇರಳದ ಕುಟುಂಬವೊಂದಕ್ಕೆ ನಿಜಕ್ಕೂ ಅಚ್ಚರಿಯ ಆಗರವಾಗಿತ್ತು. ನಾಲ್ಕನೇ ರ‍್ಯಾಂಕ್ ಗಳಿಸಿದ ಸಿದ್ಧಾರ್ಥ ರಾಮಕುಮಾರ್ ಕುಟುಂಬದಲ್ಲಿ ಈಗ ಹರ್ಷದ ಹೊನಲು ಹರಿದಿದೆ. ತಮ್ಮ ಮಗ ಪರೀಕ್ಷೆ ಮತ್ತು ಸಂದರ್ಶನಕ್ಕೆ ಹಾಜರಾಗಿದ್ದ ಎನ್ನುವುದೇ ಹೆತ್ತವರ ಸಹಿತ ಕುಟುಂಬದ ಯಾರಿಗೂ ಗೊತ್ತಿರಲಿಲ್ಲ. ಬಂದರು ನಗರವಾದ ಕೊಚ್ಚಿಯ ನಿವೃತ್ತ ಶಾಲಾ ಪ್ರಿನ್ಸಿಪಾಲ್ ರಾಮಕುಮಾರ್ ಮತ್ತು ಕುಟುಂಬದವರಿಗೆ ಟಿವಿ ಸುದ್ದಿ ನೋಡಿದಾಗಲಷ್ಟೇ ತಮ್ಮ ಮನೆ ಮಗನ ಸಾಧನೆಯ ವಿಷಯ ಗೊತ್ತಾಗಿದ್ದು. ಈಗ ಅಖಿಲ ಭಾರತ ಮಟ್ಟದ ಪರೀಕ್ಷೆಯಲ್ಲಿ ನಾಲ್ಕನೇ ರ‍್ಯಾಂಕ್ ಗಳಿಸಿರುವ ಸಿದ್ಧಾರ್ಥ, ಕಳೆದ ವರ್ಷದ ರಾಜ್ಯ ನಾಗರಿಕ ಸೇವಾ ಪರೀಕ್ಷೆಯಲ್ಲಿ ಕೇರಳಕ್ಕೆ ಟಾಪರ್ ಆಗಿದ್ದು ಹೈದರಾಬಾದ್‌ನಲ್ಲಿ ಐಪಿಎಸ್ ತರಬೇತಿ ಪಡೆಯುತ್ತಿದ್ದಾರೆ.

ಕರ್ನಾಟಕದ ಅಭ್ಯರ್ಥಿಗಳು

ರ‍್ಯಾಂಕ್	ಸಾಧಕರು
100	ವಿಜೇತಾ ಬಿ ಹೊಸಮನಿ
101	ಸೌಭಾಗ್ಯ ಎಸ್ ಬೀಳಗಿಮಠ
160	ನಾಗೇಂದ್ರಬಾಬು ಕುಮಾರ್
243	ತೇಜಸ್ ಕೆ.
379	ಯಶಸ್ವಿನಿ ಆರ್.
459	ಶಶಾಂತ್ ಎನ್.ಎಂ.
480	ಪೂಲಾ ಧನುಷ್
481	ಎಂ.ಡಿ. ಆಸೀಮ್ ಮುಜ್ತೆಬಾ
538	ಸತೀಶ್ ಶ್ರೀಶೈಲ ಸೋಮ್ವಾಲ್
589	ಮೇಘನಾ ಐ.ಎಂ.
593	ಜೋಶಿ ವಿಕ್ರಂ ನರಸಿಂಹ
600	ಡಾ.ಭಾನುಪ್ರಕಾಶ್ ಜಿ.
635	ಸುಮಾ ಎಚ್.ಕೆ.
641	ಸಂತೋಷ್ ಎಸ್. ಶಿರಡೋಣ್
644	ಶಾಂತಪ್ಪ ಕುರುಬರ
667	ಭರತ್ ಸಿ ಯರಾಂ
668	ತೇಜಸ್ ಎನ್.
671	ಎಚ್.ಆರ್. ಪ್ರಮೋದ್ ಆರಾಧ್ಯ
684	ವೈಶಾಖ್ ಬಾಗೀ
696	ನವ್ಯಾ ಕೆ.
721	ಮೇಘನಾ ಕೆ.ಟಿ.
731	ಚಂದನ್ ಬಿ.ಎಸ್.
741	ವಿವೇಕ್ ರೆಡ್ಡಿ ಎನ್.
748	ಸೃಷ್ಟಿ ದೀಪ್
777	ಲೇಖನ್ ಎಂ.
787	ತೇಜಸ್ವಿನ್ ಎನ್.
795	ಪುನೀತ್ ಎಸ್.
802	ರಕ್ಷಿತ್ ಕೆ. ಗೌಡ
866	ಹಂಸ ಶ್ರೀ ಎನ್.ಎ.
868	ಸಂಪ್ರೀತ್ ಸಂತೋಷ್
901	ಅಭಿಷೇಕ್ ಕೆ.ಎಚ್.
902	ವಸಂತ್‌ಕುಮಾರ್ ಜಿ.
908	ಅಕ್ಷಯ್ ದಿಲೀಪ್ ಲಂಬೆ
939	ಗೌತಮ್ ಜಿ.
953	ಟಿ. ವಿಜಯಕುಮಾರ್
973	ತನುಜ್‌ಕುಮಾರ್ ಕೆ.

ಕೃಷಿಕನ ಮಗನಿಗೆ ಆಡಳಿತ ಸೇವೆ ಅವಕಾಶ

ಮುಳಬಾಗಿಲು: ತಾಲೂಕಿನ ಮಲ್ಲನಾಯಕನಹಳ್ಳಿ ಗ್ರಾ.ಪಂ. ವ್ಯಾಪ್ತಿಯ ತಿಮ್ಮನಾಯಕನಹಳ್ಳಿಯ ಕೃಷಿಕ ಟಿ.ಎನ್.ನಾರಾಯಣಪ್ಪ- ಸುನಂದಮ್ಮ ದಂಪತಿ ಪುತ್ರ ನಾಗೇಂದ್ರಬಾಬುಕುಮಾರ್ ಯುಪಿಎಸ್‌ಸಿಯಲ್ಲಿ 160ನೇ ರ‍್ಯಾಂಕ್ ಪಡೆದು ಭಾರತೀಯ ಆಡಳಿತ ಸೇವೆಗೆ ಅವಕಾಶ ಪಡೆದಿದ್ದಾರೆ. 7ನೇ ಬಾರಿಗೆ 160ನೇ ರ‍್ಯಾಂಕ್ ಪಡೆದು ಸಾಧನೆ ಮಾಡಿದ್ದಾರೆ.

ಅಂತಿಮ ಯತ್ನದಲ್ಲೂ ಯಶಸ್ಸು

ವಿಕ್ರಮ ನರಸಿಂಹ ಜೋಶಿ ಬೆಂಗಳೂರಿನ ಸತತವಾಗಿ 6 ಬಾರಿ ಅಖಿಲ ಭಾರತ ನಾಗರಿಕ ಸೇವಾ ಹುದ್ದೆಗಳ ಆಯ್ಕೆ ಪರೀಕ್ಷೆಯನ್ನು ಎದುರಿಸಿದ್ದಾರೆ. 2022ರಲ್ಲಿ 590ನೇ ರ‍್ಯಾಂಕ್ ಗಳಿಸಿದ್ದರು. ಹುದ್ದೆಯನ್ನು ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ ಇದು ಇವರ ಕೊನೆಯ ಪ್ರಯತ್ನವಾಗಿತ್ತು.

4ನೇ ತಲೆಮಾರು ಎಂಟ್ರಿ

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಮಗಳು ಸಂಸ್ಕೃತಿ ಸಿಂಗ್ ಯುಪಿಎಸ್ಸಿ ಪರೀಕ್ಷೆಯಲ್ಲಿ 366ನೇ ರ‍್ಯಾಂಕ್ ಪಡೆದಿದ್ದಾರೆ. ಈ ಮೂಲಕ ರಾಕೇಶ್ ಸಿಂಗ್ ಕುಟುಂಬದ 4ನೇ ತಲೆಮಾರು ನಾಗರಿಕ ಸೇವಾ ಹುದ್ದೆಗೆ ಪ್ರವೇಶ ಪಡೆದಿದೆ. ರಾಕೇಶ್ ಸಿಂಗ್ ತಾತ ಐಎಎಸ್ ಅಧಿಕಾರಿಯಾಗಿದ್ದರು. ತಂದೆ ಐಪಿಎಸ್, ರಾಕೇಶ್ ಸಿಂಗ್ ಐಎಎಸ್ ಹುದ್ದೆಯಲ್ಲಿದ್ದಾರೆ. ಅವರ ಅಳಿಯ ಕೂಡ ಈಗಾಗಲೆ ಐಆರ್‌ಎಸ್ ಸೇವೆಯಲ್ಲಿದ್ದಾರೆ. ಈಗ ಅವರ ಮಗಳು ಕೂಡ ಯುಪಿಎಸ್ಸಿ ಪರೀಕ್ಷೆಯನ್ನು 2ನೇ ಪ್ರಯತ್ನದಲ್ಲಿ ತೇರ್ಗಡೆ ಹೊಂದಿದ್ದು, 366ನೇ ರ‍್ಯಾಂಕ್ ಪಡೆದಿದ್ದಾರೆ. ದೆಹಲಿಯಲ್ಲಿ ಪರೀಕ್ಷೆ ಬರೆದಿದ್ದು, ಐಎಎಸ್ ಆಗುವ ಅವರ ಪ್ರಯತ್ನ ಮುಂದುವರಿಯಲಿದೆ ಎಂದು ರಾಕೇಶ್ ಸಿಂಗ್ ತಿಳಿಸಿದ್ದಾರೆ.

ನಿತ್ಯ 8 ತಾಸಿನ ಓದು

ಕಳೆದೆರಡು ವರ್ಷಗಳಿಂದ ಪಟ್ಟ ಪರಿಶ್ರಮಕ್ಕೆ ಫಲ ಸಿಕ್ಕ ಸಂತಸದಲ್ಲಿದ್ದಾರೆ ಬೆಂಗಳೂರು ಕೆಂಗೇರಿಯ ಕೆ. ತೇಜಸ್. ಬೆಂಗಳೂರಿನಲ್ಲಿಯೇ ಶಿಕ್ಷಣ ಪಡೆದ ತೇಜಸ್, ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನಲ್ಲಿ 2021ರಲ್ಲಿ ಪದವಿ ಪೂರ್ಣಗೊಳಿಸಿದರು. ವಾರದ ಐದು ದಿನ ಪ್ರತಿನಿತ್ಯ 8 ತಾಸು ಓದುವುದರಲ್ಲಿ ತೊಡಗಿರುತ್ತಿದ್ದೆ. ಜತೆಗೆ ಕೋಚಿಂಗ್ ಕೂಡ ಕೈಹಿಡಿಯಿತು ಎನ್ನುತ್ತಾರೆ. ವಿವಿಧ ಸಂಸ್ಥೆಗಳಲ್ಲಿ ತರಬೇತಿ ಪಡೆದಿದ್ದಾರೆ. ರಾಜ್ಯಶಾಸ್ತ್ರ ಹಾಗೂ ಅಂತಾರಾಷ್ಟ್ರೀಯ ಸಂಬಂಧನ್ನು ಮುಖ್ಯ ವಿಷಯವಾಗಿಸಿಕೊಂಡು ಪರೀಕ್ಷೆ ಬರೆದಿದ್ದರು. ಎರಡನೇ ಯತ್ನದಲ್ಲಿ ಯುಪಿಎಸ್‌ಸಿ ಹುದ್ದೆ ಅವರ ಕೈಹಿಡಿದಿದೆ. ಉದ್ಯಮಿಯಾಗಿದ್ದ ಟಿ. ಕೃಷ್ಣಪ್ರಸಾದ್, ಅಬಕಾರಿ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್ ಆಗಿರುವ ಶೈಲಜಾ ತನ್ನೆಲ್ಲ ಪ್ರಯತ್ನಕ್ಕೆ ಶಕ್ತಿ ಎಂದು ತೇಜಸ್ ಸ್ಮರಿಸುತ್ತಾರೆ.

ವಿಜಯಪುರದ ಕೀರ್ತಿ ಹೆಚ್ಚಿಸಿದ ಪ್ರತಿಭೆ

ವಿಜಯಪುರ: ವಿಜಯಪುರ ನಗರದ ಹಿರಿಯ ವಕೀಲರಾದ ಶ್ರೀಕಾಂತ ಶಿರಡೋಣ ಪುತ್ರ ಸಂತೋಷ ಶ್ರೀಕಾಂತ ಶಿರಡೋಣ 641ನೇ ರ‍್ಯಾಂಕ್ ಪಡೆದು ಜಿಲ್ಲೆಯ ಖ್ಯಾತಿ ಹೆಚ್ಚಿಸಿದ್ದಾರೆ. ಮೂಲತಃ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಸಂತೋಷ ಶಿರಡೋಣ ಸಮಾಜ ಸೇವೆ ಮಾಡಬೇಕೆಂಬ ಕನಸನ್ನು ನನಸು ಮಾಡಿಕೊಳ್ಳಲು ಲಕ್ಷಾಂತರ ರೂ. ವೇತನ ಬರುತ್ತಿದ್ದ ಸಾಫ್ಟ್‌ವೇರ್ ಇಂಜಿನಿಯರ್ ಕೆಲಸಕ್ಕೆ ರಾಜೀನಾಮೆ ನೀಡಿ, ದೆಹಲಿಗೆ ತೆರಳಿ ಸತತ ಐದು ವರ್ಷಗಳಿಂದ ಸಿವಿಲ್ ಸರ್ವೀಸ್ ಪರೀಕ್ಷೆಗೆ ತಯಾರಿ ನಡೆಸಿ, ನಾಲ್ಕನೇ ಬಾರಿಗೆ 641ನೇ ರ‍್ಯಾಂಕ್ ಪಡೆದು ಯಶಸ್ವಿಯಾಗಿದ್ದಾರೆ. ವಿಶೇಷವೆಂದರೆ ಏ.16 ಅವರ ಜನ್ಮದಿನವಾಗಿದ್ದು, ಇಂದೇ ಯುಪಿಎಸ್‌ಪಿ ಫಲಿತಾಂಶ ಬಂದಿರುವುದು ಅವರ ಮನೆಯವರ ಸಂಭ್ರಮವನ್ನು ದ್ವಿಗುಣಗೊಳಿಸಿದೆ.

ಕೊಡಗಿನ ಕುವರ ಉತ್ತೀರ್ಣ

ಮಡಿಕೇರಿ: ಕೊಡಗಿನ ಕೆ.ಎಲ್.ಸೂರಜ್ 713ನೇ ರ‍್ಯಾಂಕ್ ಪಡೆದಿದ್ದಾರೆ. ಪ್ರಸ್ತುತ ಅಸಿಸ್ಟೆಂಟ್ ಸೆಂಟ್ರಲ್ ಇನ್ವೆಸ್ಟಿಗೇಷನ್ ಆಫೀಸರ್ ಆಗಿ ಕೇಂದ್ರ ಗೃಹ ಇಲಾಖೆಯ ಬೆಂಗಳೂರು ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸೂರಜ್ ತಂದೆ ಕೆ.ಬಿ.ಲಿಂಗರಾಜ್ ಕೇಂದ್ರ ಕಸ್ಟಮ್ಸ್ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿ ಮೈಸೂರಿನ ಜಿಎಸ್‌ಟಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಿರಂತರ ಪ್ರಯತ್ನಕ್ಕೆ ಸಿಕ್ಕ ಫಲ

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಹಳ್ಳಮಾದಳ್ಳಿಯ ಪ್ರಮೋದ್ ಆರಾಧ್ಯ ಎರಡನೇ ಬಾರಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ್ದಾರೆ. 2020ರಲ್ಲಿ ಉತ್ತೀರ್ಣರಾಗಿದ್ದರು. ಪ್ರಸ್ತುತ ದೆಹಲಿಯಲ್ಲಿ ಸಿವಿಲ್ ಅಕೌಂಟ್ಸ್ ಸರ್ವೀಸ್ (ಐಸಿಎಎಸ್) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಫಲಿತಾಂಶವನ್ನು ಉತ್ತಮ ಪಡಿಸಿಕೊಳ್ಳುವ ಗುರಿಯೊಂದಿಗೆ ಮತ್ತೆ ಮತ್ತೆ ಪರೀಕ್ಷೆ ಬರೆಯುತ್ತಿದ್ದು, ಇದು ಅವರ 6ನೇ ಪ್ರಯತ್ನವಾಗಿದೆ.

ಐಎಎಸ್ ಗುರಿ

ಶಿವಮೊಗ್ಗದ ಮೇಘನಾ ಈ ಬಾರಿ 589ನೇ ರ‍್ಯಾಂಕ್ ಗಳಿಸಿದ್ದಾರೆ. ಆದರೆ, ಎರಡನೇ ಬಾರಿ ಪರೀಕ್ಷೆ ಯಲ್ಲಿ ಪಾಸಾಗಿದ್ದರೂ ರ‍್ಯಾಂಕ್ ಉತ್ತಮ ಗೊಳ್ಳಲಿಲ್ಲ ಎಂಬ ನಿರಾಸೆಯಲ್ಲಿದ್ದಾರೆ. ಏಕೆಂದರೆ ಅವರು ಪ್ರಸ್ತುತ ಮಹಾರಾಷ್ಟ್ರದ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿ ಪ್ರೊಬೇಷನರಿ ತರಬೇತಿಯಲ್ಲಿದ್ದಾರೆ.

ಸ್ವಪ್ರಯತ್ನದಿಂದ 440ನೇ ರ‍್ಯಾಂಕ್

ಹುಬ್ಬಳ್ಳಿ: ಯಾವುದೇ ತರಬೇತಿ ಪಡೆಯದೆ ಸ್ವಂತ ಅಧ್ಯಯನದಿಂದ ಹುಬ್ಬಳ್ಳಿಯ ಕೃಪಾ ಅಭಯ ಜೈನ್ 440ನೇ ರ‍್ಯಾಂಕ್ ಪಡೆದಿದ್ದಾರೆ. 3ನೇ ಪ್ರಯತ್ನದಲ್ಲಿ ಈ ಸಾಧನೆ ಮಾಡಿದ್ದಾರೆ. 2ನೇ ಪ್ರಯತ್ನದಲ್ಲಿ ಅವರು ಮೀಸಲು ಪಟ್ಟಿಯಲ್ಲಿ ಇದ್ದರು. ಇಂಡಿಯನ್ ರೈಲ್ವೆ ಮ್ಯಾನೇಜಮೆಂಟ್ ಸರ್ವಿಸ್ (ಐಆರ್‌ಎಂಎಸ್)ಗೆ ಆಯ್ಕೆಯಾಗಿ ಲಕ್ನೋದಲ್ಲಿ ಸೇವೆಗೆ ಸೇರಿದ್ದರು. ಹೆಚ್ಚಿನ ರ‍್ಯಾಂಕ್ ಪಡೆಯುವ ಉದ್ದೇಶದಿಂದ ಮತ್ತೊಮ್ಮೆ ನಾಗರಿಕ ಸೇವಾ ಪರೀಕ್ಷೆ ಎದುರಿಸಿದ್ದರು.

5ನೇ ಪ್ರಯತ್ನದಲ್ಲಿ 481ನೇ ರ‍್ಯಾಂಕ್

ಬೀದರ್: ನಗರದ ಎಂ.ಡಿ. ಆಸೀಮ್ ಮುಜ್ತೆಬಾ 481ನೇ ರ‍್ಯಾಂಕ್ ಗಳಿಸಿ ಅದ್ಭುತ ಪ್ರತಿಭೆ ಪ್ರದರ್ಶಿಸಿದ್ದಾರೆ. ಗೋಲೆಖಾನಾ ನಿವಾಸಿ ಆಸೀಮ್ ಬಿಇ ಕೆಮಿಕಲ್ ಇಂಜಿನಿಯರಿಂಗ್ ಬಳಿಕ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿ ಮೂರು ಬಾರಿಯ ವೈಫಲ್ಯದ ಬಳಿಕ ನಾಲ್ಕನೇ ಯತ್ನದಲ್ಲಿ ಕಳೆದ ವರ್ಷ 930ನೇ ರ‍್ಯಾಂಕ್ ಗಳಿಸಿದ್ದರು. ಇಷ್ಟಕ್ಕೂ ತೃಪ್ತಿಯಾಗದೆ ಮತ್ತೆ ಪರೀಕ್ಷೆ ಬರೆದ ಆಸೀಮ್ ಇದೀಗ 481ನೇ ರ‍್ಯಾಂಕ್ ಪಡೆದು ಸಾಧನೆ ಮೆರೆದಿದ್ದಾರೆ.

ಅಪ್ಪಟ ಗ್ರಾಮೀಣ ಪ್ರತಿಭೆ ಲೇಖನ್

ಹುಣಸೂರು ತಾಲೂಕಿನ ಕೊತ್ತೇಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿಪ್ಪಲಾಪುರ ಗ್ರಾಮದ ನಿವಾಸಿ ಎಲ್.ಮಹದೇವ ಮತ್ತು ಕೆ.ಟಿ. ಶೈಲಜಾ ದಂಪತಿ ಪುತ್ರ ಎಂ. ಲೇಖನ್ ನಾಲ್ಕನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, 777ನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ. ಲೇಖನ್ ಅಪ್ಪಟ ಗ್ರಾಮೀಣ ಪ್ರತಿಭೆ. ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರತಿಯೊಬ್ಬರು ತರಬೇತಿ ಪಡೆದುಕೊಳ್ಳುತ್ತಾರೆ. ಆದರೆ, ಲೇಖನ್ ಮನೆಯಲ್ಲಿದ್ದುಕೊಂಡೇ ಯಾವುದೇ ತರಬೇತಿ ಕೇಂದ್ರಕ್ಕೆ ಸೇರ್ಪಡೆಗೊಳ್ಳದೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವುದು ವಿಶೇಷ.